ಈ) ಹೌದು. ಸುಸಜ್ಜಿತವಾದ ಉಪಕರಣ ಹಾಗೂ ಶಸ್ತ್ರಚಿಕಿತ್ಸಾ ಕೊಠಡಿ ಮತ್ತು ಸಾಕಷ್ಟು ಪ್ರಸೂತಿವಾರ್ಡ್ ಅನುಕೂಲಗಳನ್ನು ಒದಗಿಸಿರುತ್ತದೆ.

1997-98ರಲ್ಲಿ ಸರಬರಾಜು ಮಾಡಲಾಗಿರುವ ಉಪಕರಣಗಳು -

1. ಆಪರೇಟಿವ್ ಮೈಕ್ರೋಸ್ಕೋಪ್
2. ಫೀಟಲ್ ಮಾನಿಟರ್
3. ಅಲ್ಟ್ರಾಸೌಂಡ್ ಯೂನಿಟ್
4. ಫಲ್ಸ್ ಆಕ್ಸಿಮೀಟರ್
5. ಕಾರ್ಡಿಯಾಕ್ ಮಾನಿಟರ್ (2)
6. ಆಪರೇಟಿವ್ ವೆಂಟಿಲೇಟರ್ (2)
7. ಅಡಲ್ಟ್ ಅಂಡ್ ಪೀಡಿಯಾಟ್ರಿಕ್ ವೆಂಟಿಲೇಟರ್ (5)
8. ಡಿಫಬ್ರೇಟರ್ಸ್ (1)

ಉ) 1997-98ನೇ ಸಾಲಿನಲ್ಲಿ ಈ ಆಸ್ಪತ್ರೆಗೆ ಉತ್ತಮ ಸೌಲಭ್ಯವನ್ನು ಒದಗಿಸಲು ಸಲಕರಣೆ ಔಷಧಿ, ಹಾಸಿಗೆ, ಹೊದಿಕೆಗಳು ಹಾಗೂ ಪಥ್ಯಾಹಾರಕ್ಕಾಗಿ ರೂ.95.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಶ್ರೀಮತಿ ಡಿ.ಜಿ.ಹೇಮಾವತಿ: ಪ್ರೈವೇಟ್ ಹಾಸ್ಪಿಟಲ್‌ಗಳಲ್ಲಿ ಬಹಳ ಒಳ್ಳೆಯ ಮಾಡರ್ನ್ ಎಕ್ವಿಪ್‌ಮೆಂಟ್‌ಗಳಿವೆ. ನಮ್ಮ ಗೌರ್ನಮೆಂಟ್ ಹಾಸ್ಪಿಟಲ್‌ಗಳಲ್ಲೂ ಮಾಡರ್ನ್ ಎಕ್ವಿಪ್‌ಮೆಂಟ್‌ಗಳು ಬೇಕು ಎಂದು ಕೇಳುತ್ತೇನೆ.

ಡಾ: ಎಂ.ಶಂಕರನಾಯಕ್: ಮಾಡರ್ನ್ ಎಕ್ವಿಪ್‌ಮೆಂಟ್‌ಗಳನ್ನು ಏನೇನು ಖರೀದಿಸಿದ್ದೇವೆಂಬುದನ್ನು ಉತ್ತರದಲ್ಲಿ ಹೇಳಿದ್ದೇವೆ. ವಾಣಿ ವಿಲಾಸ ಆಸ್ಪತ್ರೆಯಲ್ಲಿ ಆಪರೇಟೀವ್ ಮೈಕ್ರೋಸ್ಕೋಪ್, ಫೀಟಲ್ ಮಾನಿಟರ್, ಅಲ್ಟ್ರಾಸೌಂಡ್ ಫಲ್ಸ್ ಆಕ್ಸಿಮೀಟರ್, ಕಾರ್ಡಿಯಾಕ್ ಮಾನಿಟರ್-2, ಅಡಲ್ಟ್ ಅಂಡ್ ಪೀಡಿಯಾಟ್ರಿಕ್ ವೆಂಟಿಲೇಟರ್-2, ಡಿಫ್ಯಬ್ರಿಲೇಟರ್‌ಗಳನ್ನು ಒದಗಿಸಲಾಗಿದೆ.

Subject: Number of students appeared for VIIth standard Examination.

233 (1346)

Sri Allam Veerabhadrappa (Kurugodu): Will the Hon.Minister for Primary & Secondary Education be pleased to state:

a) Total number of girls and Boys students appeared for VII Standard Public Examination during the year 1996-97 (District-wise figures be furnished)

b) Out of them, from Bellary District number of students appeared for the examination and number of students failed.

c) The reasons for more number of failures;

d) Whether it has come to the notice of the Government that these failed students have discontinued their studies.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

a) Boys - 3,61,309

Girls - 2,98,312

(District wise statement is enclosed)

b) 21025 students appeared from Bellary District, out of them the number of students who failed were 5216.

c) In Bellary District the percentage of pass was 75.19. Hence it cannot be assumed that the percentage of failures is high.

d) No. However adequate opportunities have been provided for such failed students to continue their studies.

ಅನುಬಂಧ - 1

ಕ್ರ.ಸಂ.	ಜಿಲ್ಲೆಯ ಹೆಸರು	ವಿದ್ಯಾರ್ಥಿಗಳು	ವಿದ್ಯಾರ್ಥಿನಿಯರು	ಒಟ್ಟು
1.	ಬೆಂಗಳೂರು ಉತ್ತರ	17355	17094	34449
2.	ಬೆಂಗಳೂರು ದಕ್ಷಿಣ	21681	21879	43560
3.	ಬೆಂಗಳೂರು ಗ್ರಾಮಾಂತರ	15543	13559	29102
4.	ಬೆಳಗಾಂ	28037	21789	49826
5.	ಬಳ್ಳಾರಿ	12835	8190	21025
6.	ಬೀದರ್	9437	7066	16503
7.	ಬಿಜಾಪುರ	22185	13856	36041
8.	ಚಿಕ್ಕಮಗಳೂರು	8124	7701	15825
9.	ಚಿತ್ರದುರ್ಗ	19641	15204	34845
10.	ದಕ್ಷಿಣ ಕನ್ನಡ	25759	24392	50151
11.	ಧಾರವಾಡ	26880	21538	48418
12.	ಗುಲ್ಬರ್ಗ	17099	10711	27810
13.	ಹಾಸನ	14126	13019	27145
14.	ಕೊಡಗು	4018	3888	7906
15.	ಕೋಲಾರ	19500	15054	34554
16.	ಮಂಡ್ಯ	14580	13473	28053
17.	ಮೈಸೂರು	23733	20142	43875
18.	ರಾಯಚೂರು	13115	7467	20582
19.	ಶಿವಮೊಗ್ಗ	16321	14789	31110
20.	ತುಮಕೂರು	22050	19106	41156
21.	ಉತ್ತರಕನ್ನಡ	9290	8395	17685
	ಒಟ್ಟು	361309	298312	659621

11.00 ಎ.ಎಂ

ಶ್ರೀ ಅಲ್ಲಂ ವೀರಭದ್ರಪ್ಪ: ಮಾನ್ಯ ಸಚಿವರು ಕೊಟ್ಟಿರುವ ಅಂಕಿಅಂಶಗಳನ್ನು ಅವಲೋಕಿಸಿದಾಗ, ಬೇರೆ ಯಾವುದೇ ಜಿಲ್ಲೆಗಳಿಗಿಂತ ಬಳ್ಳಾರಿ ಜಿಲ್ಲೆಯಲ್ಲಿ ಬಹಳ ಕಡಿಮೆ ಪರ್ಸೆಂಟೇಜ್‌ನಲ್ಲಿ ಪಾಸಾಗಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬರುವ ವಿದ್ಯಾರ್ಥಿಗಳು ಪಾಸಾಗದೇ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿಲ್ಲ ಎಂಬುದು ತಿಳಿದು ಬಂದಿದೆ. ಇದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಸ್ನೇಹಿತರು ಬಳ್ಳಾರಿ ಜಿಲ್ಲೆಯಲ್ಲಿ ಬಹಳ ಕಡಿಮೆ ಪರ್ಸೆಂಟೇಜ್‌ನಲ್ಲಿ ಪಾಸಾಗಿದ್ದಾರೆಂದು ಹೇಳುತ್ತಿದ್ದಾರೆ. ಇದು ನಿಜ, ಇವರಿಗೆ ಹಾಗೆ ಕಾಣಿಸುತ್ತದೆ. ಪ್ರಪ್ರಥಮವಾಗಿ ನಾವು 7ನೇ ತರಗತಿ ಪರೀಕ್ಷೆಯನ್ನು ಪಬ್ಲಿಕ್ ಪರೀಕ್ಷೆ ಮಾಡಿರುವುದರಿಂದ, ಇದೇ ರೀತಿಯಲ್ಲಿ ಬೇರೆ ಜಿಲ್ಲೆಗಳಲ್ಲಿ ಆಗಿದೆ. ಉದಾಹರಣೆಗೆ ಹೇಳುವುದಾದರೆ, ತುಮಕೂರು, ಚಿಕ್ಕಮಗಳೂರು, ಬೀದರ್, ಕೋಲಾರ, ಹೀಗೆ ಹಲವಾರು ಜಿಲ್ಲೆಗಳಲ್ಲಿ ತಮ್ಮ ಜಿಲ್ಲೆಯಲ್ಲಿ ಬಂದಿರುವ ಶೇಕಡ 75.19ರಷ್ಟೇ ಪರ್ಸೆಂಟೇಜ್ ಬಂದಿದೆ. ಫೇಲಾದ ವಿದ್ಯಾರ್ಥಿಗಳಿಗೆ ಡಿಸ್‌ಕಂಟಿನ್ಯೂ ಮಾಡದ ಹಾಗೆ ಹೆಚ್ಚಿನ ಆಸಕ್ತಿ ವಹಿಸಿಕೊಟ್ಟು, ವಿದ್ಯಾಭ್ಯಾಸವನ್ನು ಮುಂದುವರಿಸುವಂತೆ, ಈಗಾಗಲೇ ಡಿಡಿಪಿಐ, ಬಿಇಒ, ಶಾಲಾ ಮುಖ್ಯೋಪಾಧ್ಯಾಯರಿಗೆ ಸರ್ಕಾರದಿಂದ ಆದೇಶ ಕೊಟ್ಟಿದ್ದೇವೆ. ಫೇಲಾದ ಹುಡುಗರಿಗೆ ಹೆಚ್ಚಿನ ಆಸಕ್ತಿ ಬರುವಂತೆ ಅದೇ ಶಾಲೆಯಲ್ಲಿ ಹೆಚ್ಚಿನ ಪಾಠ-ಪ್ರವಚನ ಮಾಡಿ, ವಿದ್ಯಾಭ್ಯಾಸದಲ್ಲಿ ಮುಂದುವರಿಸುವಂತೆ ನಾವು ಕ್ರಮ ಕೈಗೊಂಡಿದ್ದೇವೆ. ತಾವು ತಮ್ಮ ಜಿಲ್ಲೆಗೆ ಮಾತ್ರ ಈ ರೀತಿಯಾಗಿದೆ ಎಂದು ಭಾವಿಸಿ ಮನಸ್ಸಿಗೆ ದಯಮಾಡಿ ನೋವು ಮಾಡಿಕೊಳ್ಳಬೇಡಿ. ಈ ವರ್ಷ ಕಡಿಮೆಯಾಗಿರಬಹುದು. ಕಳೆದ ವರ್ಷ ಸುಮಾರು ಏಳೂವರೆಯಿಂದ ಎಂಟು ಗಂಟೆಯವರೆಗೆ ನಮ್ಮ ರಾಜ್ಯದಲ್ಲಿ ಅನೇಕ ಪ್ರಾಥಮಿಕ ಪಾಠಶಾಲೆಗಳಲ್ಲಿ ಪಾಠ-ಪ್ರವಚನಗಳಲ್ಲಿ ತೊಡಗಿಸಿರುವುದನ್ನು ನಾವು ಮಾಡಿದ್ದೇವೆ. ಈ ವರ್ಷ ಸಹಿತ ಅದೇ ರೀತಿಯಲ್ಲಿ ಹೆಚ್ಚು ಉತ್ಸಾಹದಿಂದ, ಕೆಲಸ ಮಾಡುವಂತೆ, ಉಪಾಧ್ಯಾಯರಿಗೆ ಆದೇಶ ಕೊಟ್ಟಿದ್ದೇವೆ. ಮತ್ತು ತಂದೆ-ತಾಯಿಗಳು ಕೂಡ ಮುತುವರ್ಜಿ ವಹಿಸಿ, ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿಕೊಟ್ಟು, ಮನೆಗೆ ಬಂದ ತಕ್ಷಣ ಅವರನ್ನು ಓದಿಕೊಳ್ಳಿ ಎಂದು ಹೇಳತಕ್ಕಂಥ ಕಾರ್ಯಕ್ರಮದಲ್ಲಿ ತೊಡಗಿಸುವುದು ಬಹಳ ಒಳ್ಳೆಯದು. ಈ ಕ್ರಮವನ್ನು ನಾವು ಎಲ್ಲರೂ ಮಾಡಬೇಕು. ಆದ್ದರಿಂದ, ಬೇರೆ ಜಿಲ್ಲೆಯಲ್ಲೂ ಕಡಿಮೆ ಪರ್ಸೆಂಟೇಜ್ ಬಂದಿರುವುದರಿಂದ, ತಮ್ಮ ಜಿಲ್ಲೆಗೆ ಮಾತ್ರ ಕಡಿಮೆ ಬಂದಿದೆ ಎಂದು ಭಾವಿಸಬಾರದು ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.